**ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 05-04-2022 ರಂದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ 2021-22 ನೇ ಸಾಲಿನ ಪ್ರಗತಿ ಪರಿಶೀಲನೆ ಹಾಗೂ 2022-23ನೇ ಸಾಲಿಗೆ ನಿಗಧಿಪಡಿಸಬೇಕಾಗಿರುವ ಇಲಾಖಾ ಕಾರ್ಯಕ್ರಮ ಮತ್ತು ಇಲಾಖೆಯ ಇನ್ನಿತರೆ ವಿಷಯಗಳ ಚರ್ಚೆ ಸಂಬಂಧ ನಡೆದ ಅಧಿಕಾರಿಗಳ ಸಭೆಯ ನಡಾವಳಿಗಳು.**

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಿದರು.

**ಇಲಾಖಾ ಕಾರ್ಯಕ್ರಮದನ್ವಯ ಸಾಧಿಸಿರುವ ವಿಭಾಗೀಯವಾರು ಪ್ರಗತಿ ಪರಿಶೀಲನೆಯನ್ನು ಈ ಕೆಳಕಂಡಂತೆ ಅಧಿಕಾರಿಗಳಿಂದ ಪಡೆಯಲಾಯಿತು.**

## ಕಲಬುರಗಿ ವಿಭಾಗ:

### ಬಳ್ಳಾರಿ ಜಿಲ್ಲೆ:

### ಸಹಾಯಕ ನಿರ್ದೇಶಕರ ಕಛೇರಿ ಬಳ್ಳಾರಿ:

**ಕೂಡ್ಲಿಗಿ, ಕೊಟ್ಟೂರು, ಹೂವಿನಹಡಗಲಿ, ತೆಕ್ಕಲಕೋಟೆ, ಹಗರಿ ಬೊಮ್ಮನಹಳ್ಳಿ ಹಾಗೂ ಕುರುಗೋಡು** ಪಟ್ಟಣಗಳ ಪುರಸಭೆ ಸರಹದ್ದಿನ ನ್ಯೂನತೆ ಇರುವ ಅಂಶವನ್ನು ಸಹಾಯಕ ನಿರ್ದೇಶಕರು ಸಭೆಗೆ ತಿಳಿಸಿದರು.

ಕಂಪ್ಲಿ ಪಟ್ಟಣದ ಮಹಾಯೋಜನೆ (ಪ-I) ತಾತ್ಕಾಲಿಕ ಅನುಮೋದನೆಗೊಂಡಿದ್ದು ಅಂತಿಮ ಅನುಮೋದನೆಗೆ ಸಲ್ಲಿಸುವ ಸಂಬಂಧ ಒಟ್ಟು 45 ಸಾರ್ವಜನಿಕ ಸಲಹೆ/ ಆಕ್ಷೇಪಣೆಗಳು ಸ್ವೀಕೃತವಾಗಿರುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ತಿಳಿಸಿದರು. ಸದರಿ ಮಹಾಯೋಜನೆಯನ್ನು ಸರ್ಕಾರದ ಅಂತಿಮ ಅನುಮೋದನೆಗೆ 03 ತಿಂಗಳೊಳಗಾಗಿ ಸಲ್ಲಿಸುವಂತೆ ಸಹಾಯಕ ನಿರ್ದೇಶಕರಿಗೆ ಸೂಚಿಸಲಾಯಿತು. ಸದರಿ ವಿಷಯದಲ್ಲಿ ಸಹಾಯಕ ನಿರ್ದೇಶಕರು, ಬಳ್ಳಾರಿರವರಿಗೆ ಸೂಕ್ತ ಸಹಕಾರ ನೀಡುವುದಾಗಿ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಕಲಬುರಗಿ ರವರು ಸಭೆಗೆ ತಿಳಿಸಿದರು. ಅದರಂತೆ ಕ್ರಮವಹಿಸಲು ನಿರ್ದೇಶಕರು ಸೂಚಿಸಿದರು.

**ಹರಪ್ಪನಹಳ್ಳಿ** ಪಟ್ಟಣದ ಮಹಾಯೋಜನೆ (ಪ-II) ಸಿದ್ದಪಡಿಸಲು ಟೆಂಡರ್ ಕರೆಯಲಾಗಿದ್ದು, ಯಾವುದೇ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೇ ಇರುವ ಅಂಶವನ್ನು ಹಾಗೂ ಮತ್ತೊಮ್ಮೆ ಟೆಂಡರ್ ಕರೆಯುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಸದರಿ ವಿಷಯದ ಬಗ್ಗೆ ನಿರ್ದೇಶಕರು ಮಾತನಾಡಿ ಮರು ಟೆಂಡರ್‌ಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಇಲಾಖೆಯ ವತಿಯಿಂದಲೇ ಮಹಾಯೋಜನೆಯನ್ನು ಸಿದ್ಧಪಡಿಸಲು ಹಾಗೂ ತತ್ಸಂಬಂಧ ವೆಚ್ಚವನ್ನು ಭರಿಸುವ ಬಗ್ಗೆ ಹರಪ್ಪನಹಳ್ಳಿ ಪುರಸಭೆಯ ಮುಖ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ನಿರ್ದೇಶಕರು ಬಳ್ಳಾರಿ ರವರಿಗೆ ಸೂಚಿಸಿದರು.

**ರಾಯಚೂರು ಜಿಲ್ಲೆ :**

**ಸಹಾಯಕ ನಿರ್ದೇಶಕರ ಕಛೇರಿ ರಾಯಚೂರು:**

**ಮಸ್ಕಿ, ದೇವದುರ್ಗ, ಮುದಗಲ್, ಸಿರವಾರ, ಕವಿತಾಳ, ಬಳಗಾನೂರು ಮತ್ತು ತುರವಿಹಾಳ** ಪಟ್ಟಣಗಳ ಸ್ಥಳೀಯ ಸಂಸ್ಥೆಗಳ ಸರಹದ್ದಿನ ನ್ಯೂನತೆ ಇರುವ ಕುರಿತು ಹಾಗೂ ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುವ ಬಗ್ಗೆ ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಹಟ್ಟಿ ಪಟ್ಟಣದ ಸರಹದ್ದಿನ ನ್ಯೂನತೆ ಇರುವ ಕುರಿತು ಸಹ ಸಭೆಗೆ ಮಾಹಿತಿ ನೀಡಿದರು.

**ಯೋಜನಾ ಪ್ರಾಧಿಕಾರಗಳು:**

**ಲಿಂಗಸುಗೂರು** ಯೋಜನಾ ಪ್ರಾಧಿಕಾರ ರಚನೆಯಾಗಿದ್ದು, ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, ಕಲಂ 5 ರಂತೆ ಹಾಲಿ ಭೂ ಉಪಯೋಗ ನಿರ್ಧರಣಾ ದಿನಾಂಕವನ್ನು ನಿಗಧಿಪಡಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಹಾಗೂ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಯಿಂದ ಸಾಲ ಪಡೆದು ಮಹಾಯೋಜನೆಯನ್ನು ಸಿದ್ಧಪಡಿಸಲು ಕ್ರಮವಹಿಸುವಂತೆ ಸದಸ್ಯ ಕಾರ್ಯದರ್ಶಿ, ಲಿಂಗಸುಗೂರು ಯೋಜನಾ ಪ್ರಾಧಿಕಾರ ಇವರಿಗೆ ತಿಳಿಸಲಾಯಿತು.

**ಮಾನವಿ** ಪಟ್ಟಣದ ಮಹಾಯೋಜನೆ (ಪ–I)ನ್ನು ಪರಿಶೀಲನೆಗೆ ಸಲ್ಲಿಸುವಂತೆ ಈಗಾಗಲೇ ತಿಳಿಸಲಾಗಿದ್ದರೂ ಸಹ ಪರಿಶೀಲನೆಗೆ ಹಾಜರಾಗಿರುವುದಿಲ್ಲ. ಹಾಗಾಗಿ ಕೂಡಲೇ ಕೇಂದ್ರ ಕಛೇರಿಯಿಂದ ದಿನಾಂಕ ನಿಗದಿಪಡಿಸಿಕೊಂಡು ನಕ್ಷೆಗಳೊಂದಿಗೆ ಹಾಜರಾಗುವಂತೆ ಸದಸ್ಯ ಕಾರ್ಯದರ್ಶಿ, ಮಾನವಿ ಯೋಜನಾ ಪ್ರಾಧಿಕಾರ ಇವರಿಗೆ ತಿಳಿಸಲಾಯಿತು.

**ಸಿಂಧನೂರು** ಪಟ್ಟಣದ ಮಹಾಯೋಜನೆ (ಪ–II)ನ್ನು 02 ತಿಂಗಳೊಳಗಾಗಿ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿ, ಸಿಂಧನೂರು ಯೋಜನಾ ಪ್ರಾಧಿಕಾರ ಇವರಿಗೆ ತಿಳಿಸಲಾಯಿತು.

**ಕೊಪ್ಪಳ ಜಿಲ್ಲೆ:–**

**ಸಹಾಯಕ ನಿರ್ದೇಶಕರ ಕಛೇರಿ ಕೊಪ್ಪಳ:**

**ಕುಕನೂರು, ತಾವರಗೇರಾ, ಕಾರಟಗಿ ಹಾಗೂ ಕನಕಗಿರಿ** ಪಟ್ಟಣಗಳ ಸ್ಥಳೀಯ ಸಂಸ್ಥೆಗಳ ಸರಹದ್ದಿನ ನ್ಯೂನತೆ ಇರುವ ಕುರಿತು ಹಾಗೂ ತಿದ್ದುಪಡಿ ಪ್ರಸ್ತಾವನೆಗಳು ಪೌರಾಡಳಿತ ನಿರ್ದೇಶನಾಲಯದಲ್ಲಿರುವ ಮಾಹಿತಿಯನ್ನು ಸಹಾಯಕ ನಿರ್ದೇಶಕರು ಸಭೆಗೆ ತಿಳಿಸಿದರು.

**ಕುಷ್ಟಗಿ** ಪುರಸಭೆ ವ್ಯಾಪ್ತಿಯನ್ನು ಪೂರ್ಣ ಕಂದಾಯ ಗ್ರಾಮಕ್ಕೆ ವಿಸ್ತರಿಸುವ ಪ್ರಸ್ತಾವನೆ ಇರುವ ಬಗ್ಗೆ ಹಾಗೂ ಪರಿಷ್ಕೃತ ಅಧಿಸೂಚನೆ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಪೌರಾಡಳಿತ ನಿರ್ದೇಶನಾಲಯಕ್ಕೆ ಕಳುಹಿಸಲು ಕ್ರಮವಹಿಸುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ತಿಳಿಸಿದರು. ಅದರಂತೆ ಕೂಡಲೇ ಕ್ರಮವಹಿಸಲು ಸೂಚಿಸಲಾಯಿತು.

**ಯಾದಗಿರಿ ಜಿಲ್ಲೆ:-**

**ಸಹಾಯಕ ನಿರ್ದೇಶಕರ ಕಛೇರಿ ಯಾದಗಿರಿ:**

ಸಹಾಯಕ ನಿರ್ದೇಶಕರು, ಯಾದಗಿರಿ ರವರು ಕೇಂದ್ರ ಕಛೇರಿಯ ಪೂರ್ವಾನುಮತಿ ಪಡೆಯದೇ ಸಭೆಗೆ ಗೈರು ಹಾಜರಾದ ಕಾರಣ ಸದರಿಯವರಿಗೆ ನೋಟಿಸ್ ಜಾರಿಗೊಳಿಸಲು ತಿಳಿಸಲಾಯಿತು.

**ಗುರುಮಿಟ್ಕಲ್** ಪಟ್ಟಣದ ಪ್ರಸ್ತಾಪಿತ ಸ್ಥಳೀಯ ಯೋಜನಾ ಪ್ರದೇಶದ ಅನುಸೂಚಿ-ಬಿ ರಲ್ಲಿ ಪುರಸಭೆ ಎಲ್ಲೆಯು ನಿರಂತರವಾಗಿ ಸಾಗುತ್ತಿರುವುದರಿಂದ ಆದಷ್ಟು ಬೇಗ ಕ್ರಮಜರುಗಿಸಲು ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಗುರುಮಿಟ್ಕಲ್ ಇವರಿಗೆ ಪತ್ರ ಬರೆಯಲಾಗಿರುತ್ತದೆ ಎಂದು ಸಹಾಯಕ ನಗರ ಯೋಜಕರು ಸಭೆಗೆ ತಿಳಿಸಿದರು.

**ಕೆಂಬಾವಿ ಮತ್ತು ಕಕ್ಕೇರಾ** ಪುರಸಭೆ ವ್ಯಾಪ್ತಿಯ ನಕ್ಷೆ ಹಾಗೂ ಅಧಿಸೂಚನೆಗಳೂ ತಾಳೆ ಹೊಂದುತ್ತಿರುವುದಿಲ್ಲ. ಇವುಗಳನ್ನು ಪರಿಷ್ಕರಿಸಿ ಅನುಮೋದಿಸಲು ಜಿಲ್ಲಾಧಿಕಾರಿಗಳು, ಯಾದಗಿರಿ ರವರು ದಿನಾಂಕ:01-06-2018 ರಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರದಿಂದ ತಿದ್ದುಪಡಿ ಆದೇಶವಾದ ನಂತರ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸಲಾಗುವುದು ಎಂದು ಸಹಾಯಕ ನಗರ ಯೋಜಕರು ಸಭೆಗೆ ತಿಳಿಸಿದರು.

**ಯೋಜನಾ ಪ್ರಾಧಿಕಾರಗಳು:-**

**ಸುರಪುರ ಯೋಜನಾ ಪ್ರಾಧಿಕಾರ:** ಸುರಪುರ ಪಟ್ಟಣದ ಮಹಾಯೋಜನೆ ಅವಧಿಯು 2021ಕ್ಕೆ ಪೂರ್ಣಗೊಂಡಿದ್ದು, ಮಹಾಯೋಜನೆ ಅವಧಿಯನ್ನು ವಿಸ್ತರಿಸುವಂತೆ ಪ್ರಾಧಿಕಾರವು ದಿನಾಂಕ: 17-11-21ರಲ್ಲಿ ಕೋರಿರುತ್ತದೆ. ಈ ಕಛೇರಿಯ ಪತ್ರ ದಿನಾಂಕ:21-01-2022 ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961ರ 76ಕೆ(1) ರಡಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

**ಶಹಾಪುರ ಯೋಜನಾ ಪ್ರಾಧಿಕಾರ**: ಶಹಾಪುರ ಪಟ್ಟಣದ ಮಹಾಯೋಜನೆ ಅವಧಿಯು 2021ಕ್ಕೆ ಪೂರ್ಣಗೊಂಡಿದ್ದು, ಮಹಾಯೋಜನೆ ಅವಧಿಯನ್ನು ವಿಸ್ತರಿಸುವಂತೆ ಪ್ರಾಧಿಕಾರವು ಕೋರಿರುತ್ತದೆ. ಈ ಕಛೇರಿಯ ಪತ್ರ ದಿನಾಂಕ:25-01-2022 ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961ರ 76ಕೆ(1) ರಡಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

**ಕಲಬುರಗಿ ಜಿಲ್ಲೆ:-**

**ಸಹಾಯಕ ನಿರ್ದೇಶಕರ ಕಛೇರಿ ಕಲಬುರಗಿ:**

**ಜೇವರ್ಗಿ, ಚಿಂಚೋಳಿ ಮತ್ತು ಅಫಜಲ್‌ಪುರ** ಪಟ್ಟಣಗಳ ಸ್ಥಳೀಯ ಸಂಸ್ಥೆಗಳ ಸರಹದ್ದಿನಲ್ಲಿ ನ್ಯೂನತೆಗಳಿದ್ದು, ಸದರಿ ನ್ಯೂನ್ಯತೆಗಳನ್ನು ಸರಿಪಡಿಸುವ ಕುರಿತು ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುವ ಬಗ್ಗೆ ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

**ಆಳಂದ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ತಾ) ಸಿದ್ದಪಡಿಸುವಿಕೆ ಕಾರ್ಯ ಪ್ರಗತಿಯಲ್ಲಿದ್ದು, ಒಂದು ತಿಂಗಳೊಳಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ವಿವರಿಸಿದರು.

**ಸೇಡಂ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪ–I)ರ ಕಾರ್ಯ ಪ್ರಗತಿಯಲ್ಲಿದ್ದು, ಮೊದಲನೇ ತ್ರೈ ಮಾಸಿಕದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ವಿವರಿಸಿದರು.

**ಯೋಜನಾ ಪ್ರಾಧಿಕಾರಗಳು:**

**ಚಿತ್ತಾಪುರ:** ಚಿತ್ತಾಪುರ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ಕೋರಿ ಸಲ್ಲಿಸಲಾಗಿದ್ದ ಪ್ರಸ್ತಾವನೆಯಲ್ಲಿ ಕೆಲವು ನ್ಯೂನತೆಗಳನ್ನು ಸರಿಪಡಿಸಿ ಸಲ್ಲಿಸುವಂತೆ ತಿಳಿಸಲಾಗಿದ್ದು, ಪ್ರಸ್ತುತ ಪ್ರಾಧಿಕಾರದಲ್ಲಿ ಕೆರೆ ಅಭಿವೃದ್ಧಿ ಶುಲ್ಕ ಮಾತ್ರ ಲಭ್ಯವಿದ್ದು, ಮಹಾಯೋಜನೆ ಸಿದ್ದಪಡಿಸಲು ಬೇರೆ ಯಾವುದೇ ಹಣವಿಲ್ಲದ ಕಾರಣ ಮಹಾಯೋಜನೆ ಸಲ್ಲಿಸುವಲ್ಲಿ ವಿಳಂಬವಾಗಿರುವುದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು.

**ವಾಡಿ–ಶಹಾಬಾದ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪ–II)ರ ಹಾಲಿ ಭೂ ಉಪಯೋಗ ನಕ್ಷೆ ಸಿದ್ಧಪಡಿಸಿದ್ದು, ವಿಭಾಗೀಯ ಕಛೇರಿ ಹಾಗೂ ವಲಯ ಕಛೇರಿಯಲ್ಲಿ ಪರಿಶೀಲಿಸಿಕೊಂಡು ಮಹಾಯೋಜನೆಯನ್ನು ಸಿದ್ಧಪಡಿಸಿ ಸಲ್ಲಿಸುವುದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು.

**ಬೀದರ್ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಬೀದರ್:**

**ಹಳ್ಳಿಖೇಡ** ಪಟ್ಟಣದ ಸ್ಥಳೀಯ ಸಂಸ್ಥೆಯ ಸರಹದ್ದಿನಲ್ಲಿ ನ್ಯೂನತೆಗಳಿದ್ದು, ಸದರಿ ನ್ಯೂನತೆಗಳನ್ನು ಸರಿಪಡಿಸುವ ಕುರಿತು ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುವ ಬಗ್ಗೆ ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

**ಔರಾದ್, ಬಾಲ್ಕಿ ಮತ್ತು ಚಿಟಗುಪ್ಪಾ** ಪಟ್ಟಣಗಳ ಮಹಾಯೋಜನೆಗಳು ತಾತ್ಕಾಲಿಕ ಅನುಮೋದನೆಗೊಂಡಿರುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ತಿಳಿಸಿದರು. ಸದರಿ ಮಹಾಯೋಜನೆಗಳನ್ನು ಸರ್ಕಾರದ ಅಂತಿಮ ಅನುಮೋದನೆಗೆ 03 ತಿಂಗಳೊಳಗಾಗಿ ಸಲ್ಲಿಸುವಂತೆ ಸಹಾಯಕ ನಿರ್ದೇಶಕರಿಗೆ ಸೂಚಿಸಲಾಯಿತು.

**ಯೋಜನಾ ಪ್ರಾಧಿಕಾರಗಳು:**

**ಬಸವಕಲ್ಯಾಣ** ಪಟ್ಟಣದ ಮಹಾಯೋಜನೆಯು ತಾತ್ಕಾಲಿಕ ಅನುಮೋದನೆಗೊಂಡಿರುವುದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಸದರಿ ಮಹಾಯೋಜನೆಯನ್ನು ಸರ್ಕಾರದ ಅಂತಿಮ ಅನುಮೋದನೆಗೆ 03 ತಿಂಗಳೊಳಗಾಗಿ ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

**ಮೈಸೂರು ವಿಭಾಗ:**

**ಮೈಸೂರು ಜಿಲ್ಲೆ :**

**ಸಹಾಯಕ ನಿರ್ದೇಶಕರ ಕಛೇರಿ ಮೈಸೂರು:**

**ಹೆಚ್.ಡಿ.ಕೋಟೆ, ಬನ್ನೂರು ಹಾಗೂ ಸರಗೂರು** ಪಟ್ಟಣಗಳ_ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಕುರಿತಂತೆ ಪುರಸಭೆ ಗಡಿಯ ಪರಿಷ್ಕರಣೆ ಪ್ರಸ್ತಾವನೆ ಇರುವ ಕುರಿತು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು, ಸಂಬಂಧಿತ ಸ್ಥಳೀಯ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತು.

**ಟಿ.ನರಸೀಪುರ** ಹಾಗೂ **ಪಿರಿಯಾಪಟ್ಟಣ** ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ತಾತ್ಕಾಲಿಕ ಅನುಮೋದನೆಗೆ 3 ತಿಂಗಳೊಳಗಾಗಿ ಸಲ್ಲಿಸಲು ಸಹಾಯಕ ನಿರ್ದೇಶಕರು, ಮೈಸೂರು ಇವರಿಗೆ ಸೂಚಿಸಲಾಯಿತು.

**ಯೋಜನಾ ಪ್ರಾಧಿಕಾರಗಳು:**

**ಹುಣಸೂರು** ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪ–II)ಯನ್ನು ತಾತ್ಕಾಲಿಕ ಅನುಮೋದನೆಗೆ 3 ತಿಂಗಳೊಳಗಾಗಿ ಸಲ್ಲಿಸಲು ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ ಇವರಿಗೆ ಸೂಚಿಸಲಾಯಿತು.

**ಹಾಸನ ಜಿಲ್ಲೆ :**

**ಸಹಾಯಕ ನಿರ್ದೇಶಕರ ಕಛೇರಿ ಹಾಸನ:**

**ಆಲೂರು** ಪಟ್ಟಣದ ಪಟ್ಟಣ ಪಂಚಾಯಿತಿ ಎಲ್ಲೆಯು ತಾಳೆಹೊಂದದೇ ಇರುವ ಕಾರಣ ತಿದ್ದುಪಡಿ ಪ್ರಸ್ತಾವನೆ ಸಲ್ಲಿಸಲು ಸರ್ಕಾರದಿಂದ ಪೌರಾಡಳಿತ ನಿರ್ದೇಶನಾಲಕ್ಕೆ ನಿರ್ದೇಶನ ನೀಡಲು ಪತ್ರ ಬರೆದಿರುವುದಾಗಿ ಸಹಾಯಕ ನಿರ್ದೇಸಕರು, ಹಾಸನ ಇವರು ತಿಳಿಸಿದರು. ಈ ಕುರಿತು ಸರ್ಕಾರಕ್ಕೆ ಪುನ: ಪತ್ರ ಬರೆಯಲು ತಿಳಿಸಲಾಯಿತು.

**ಸಕಲೇಶಪುರ** ಪಟ್ಟಣದ ಮಹಾಯೋಜನೆಯು ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿದ್ದು, ಅಂತಿಮ ಅನುಮೋದನೆ ಪ್ರಸ್ತಾವನೆ ಕುರಿತಂತೆ ಪುರಸಭೆ ಯೋಜನಾ ಪ್ರಾಧಿಕಾರದ ಅಧ್ಯಕ್ಷರು / ಸದಸ್ಯರುಗಳ ಹಸ್ತಕ್ಷೇಪದಿಂದಾಗಿ ಪುರಸಭೆಯ ಮುಖ್ಯಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸುವಲ್ಲಿ ಸಹಕರಿಸದೇ ಇರುವ ಅಂಶವನ್ನು ಸಹಾಯಕ ನಿರ್ದೇಶಕರು ಸಭೆಗೆ ತಿಳಿಸಿದರು. ನಿರ್ದೇಶಕರು ಮಾತನಾಡುತ್ತಾ, ಈಗಾಗಲೇ ತಾತ್ಕಾಲಿಕ ಅನುಮೋದನೆಗೊಂಡಿರುವ ನಕ್ಷೆಗಳನ್ನು ಅಂತಿಮ ಅನುಮೋದನೆಗೆ ಒಂದು ತಿಂಗಳೊಳಗಾಗಿ ಸಲ್ಲಿಸುವಂತೆ ಪುರಸಭೆಯ ಮುಖ್ಯಾಧಿಕಾರಿಗಳಿಗೆ ತಿಳಿಸುವಂತೆ ಸೂಚಿಸಲಾಯಿತು. ಒಂದು ವೇಳೆ ಮುಖ್ಯಾಧಿಕಾರಿಗಳು ಪ್ರಸ್ತಾವನೆ ಸಲ್ಲಿಸದೇ ಇದ್ದಲ್ಲಿ ಸೂಕ್ತ ವರದಿಯೊಂದಿಗೆ ಮಹಾಯೋಜನೆ ನಕ್ಷೆಗಳನ್ನು ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಲು ಅನುವಾಗುವಂತೆ ಯಥಾವತ್ತಾಗಿ ಕೇಂದ್ರ ಕಛೇರಿಗೆ ಸಲ್ಲಿಸುವಂತೆ ಸಹಾಯಕ ನಿರ್ದೇಶಕರು, ಹಾಸನ ರವರಿಗೆ ಸೂಚಿಸಲಾಯಿತು.

**ಹೊಳೆನರಸೀಪುರ** ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ(ಪ–II)ಯನ್ನು ತಾತ್ಕಾಲಿಕ ಅನುಮೋದನೆಗೆ 01 ತಿಂಗಳೊಳಗಾಗಿ ಸಲ್ಲಿಸಲು ಸಹಾಯಕ ನಿರ್ದೇಶಕರು, ಮೈಸೂರು ಇವರಿಗೆ ಸೂಚಿಸಲಾಯಿತು.

**ಯೋಜನಾ ಪ್ರಾಧಿಕಾರಗಳು:**

**ಅರಕಲಗೂಡು** ಪಟ್ಟಣದ ಮಹಾಯೋಜನೆ ನಕ್ಷೆ ಹಾಗೂ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗಿದ್ದು ವರದಿಯನ್ನು ಪರಿಶೀಲಿಸಿದಂತೆ ಹಲವಾರು ನ್ಯೂನತೆಗಳಿರುವುದರಿಂದ ವರದಿಯನ್ನು ಸರಿಪಡಿಸಿ ಸಲ್ಲಿಸಲು ತಿಳಿಸಿರುವಂತೆ ಕೂಡಲೇ ಕ್ರಮವಹಿಸಿ ಒಂದು ವಾರದೊಳಗಾಗಿ ವರದಿಯನ್ನು ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿಗಳು ಅರಕಲಗೂಡು ಯೋಜನಾ ಪ್ರಾಧಿಕಾರ ಇವರಿಗೆ ಸೂಚಿಸಲಾಯಿತು.

**ಅರಸೀಕೆರೆ** ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ(ಪ–II)ಗೆ ಸರ್ಕಾರದ ತಾತ್ಕಾಲಿಕ ಅನುಮೋದನೆಗೊಂಡಿದ್ದು, ಅಂತಿಮ ಅನುಮೋದನೆಗೆ ಪ್ರಸ್ತಾವನೆಯನ್ನು 03 ತಿಂಗಳೊಳಗಾಗಿ ಸಲ್ಲಿಸಲು ಸದಸ್ಯ ಕಾರ್ಯದರ್ಶಿಗಳು ಅರಸೀಕೆರೆ ಯೋಜನಾ ಪ್ರಾಧಿಕಾರ ಇವರಿಗೆ ಸೂಚಿಸಲಾಯಿತು.

**ದಕ್ಷಿಣ ಕನ್ನಡ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಮಂಗಳೂರು:**

**ವಿಟ್ಲ** ಪಟ್ಟಣವನ್ನು ಪುತ್ತೂರು ಯೋಜನಾ ಪ್ರಾಧಿಕಾರ ವ್ಯಾಪ್ತಿಗೆ ಸೇರಿಸುವ ಬಗ್ಗೆ ಪ್ರಸ್ತಾವನೆ ಇರುವುದರಿಂದ ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಪ್ರಸ್ತಾವನೆ ಕುರಿತು ಪ್ರತ್ಯೇಕವಾಗಿ ಕ್ರಮವಹಿಸದೇ ಇರುವ ಅಂಶವನ್ನು ಸಹಾಯಕ ನಿರ್ದೇಶಕರು, ಮಂಗಳೂರು ಇವರು ಸಭೆಗೆ ತಿಳಿಸಿದರು.

**ಬೆಳ್ತಂಗಡಿ** ಪಟ್ಟಣದ ಮಹಾಯೋಜನೆ ನಕ್ಷೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಿದ್ದು ಸದರಿ ನಕ್ಷೆ ಹಾಗೂ ವರದಿಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ಸಲ್ಲಿಸಲು ತಿಳಿಸಿರುವಂತೆ ಸೂಕ್ತ ಕ್ರಮ ವಹಿಸುವಂತೆ ಸಹಾಯಕ ನಿರ್ದೇಶಕರು, ಮಂಗಳೂರು ಇವರಿಗೆ ಸೂಚಿಸಲಾಯಿತು.

**ಯೋಜನಾ ಪ್ರಾಧಿಕಾರಗಳು:**

**ಮೂಡಬಿದ್ರೆ** ಪಟ್ಟಣದ ಮಹಾಯೋಜನೆಯನ್ನು ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಲು ಆದ್ಯತೆ ಮೇರೆಗೆ ಕ್ರಮ ಕೈಗೊಂಡು 01 ತಿಂಗಳೊಳಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿಗಳು ಮೂಡಬಿದ್ರೆ ಯೋಜನಾ ಪ್ರಾಧಿಕಾರ ಇವರಿಗೆ ಸೂಚಿಸಲಾಯಿತು.

**ಬಂಟ್ವಾಳ** ಪಟ್ಟಣದ ಮಹಾಯೋಜನೆ (ಪ–I) ಸರ್ಕಾರದ ತಾತ್ಕಾಲಿಕ ಅನುಮೋದನೆಗೆ 02 ತಿಂಗಳೊಳಗಾಗಿ ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿಗಳು ಬಂಟ್ವಾಳ ಯೋಜನಾ ಪ್ರಾಧಿಕಾರ ಇವರಿಗೆ ಸೂಚಿಸಲಾಯಿತು.

**ಪುತ್ತೂರು** ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ವಿಟ್ಲ ಪಟ್ಟಣವನ್ನು ಸೇರಿಸಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವ ಪ್ರಸ್ತಾವನೆ ಇರುವ ಕುರಿತು ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಸದರಿ ಪ್ರಸ್ತಾವನೆಯನ್ನು ಕೂಡಲೇ ಕೇಂದ್ರ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಯಿತು.

**ಉಡುಪಿ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಉಡುಪಿ:**

**ಬೈಂದೂರು ಹಾಗೂ ಸಾಲಿಗ್ರಾಮ** ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಕುರಿತಂತೆ ಸರಹದ್ದಿನ ನ್ಯೂನತೆ ಇರುವ ಅಂಶವನ್ನು ಹಾಗೂ ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುವ ಕುರಿತು ಸಹಾಯಕ ನಿರ್ದೇಶಕರು, ಉಡುಪಿ ರವರು ಸಭೆಗೆ ತಿಳಿಸಿದರು.

**ಕುಂದಾಪುರ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಕೇಂದ್ರ ಕಛೇರಿಗೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು, ಉಡುಪಿ ರವರು ಸಭೆಗೆ ತಿಳಿಸಿದರು.

**ಕಾರ್ಕಳ** ಪಟ್ಟಣದ ಮಹಾಯೋಜನೆ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿರುವ ಕುರಿತು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಸದರಿ ಪಟ್ಟಣದ ಮಹಾಯೋಜನೆಯನ್ನು ತಾತ್ಕಾಲಿಕ ಅನುಮೋದನೆಗೆ 03 ತಿಂಗಳೊಳಗಾಗಿ ಸಲ್ಲಿಸುವಂತೆ ಸದರಿಯವರಿಗೆ ಸೂಚಿಸಲಾಯಿತು.

**ಕಾಪು** ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ತಾತ್ಕಾಲಿಕ ಅನುಮೋದನೆಗೆ 03 ತಿಂಗಳೊಳಗಾಗಿ ಸಲ್ಲಿಸುವಂತೆ ಸಹಾಯಕ ನಿರ್ದೇಶಕರು, ಉಡುಪಿ ಇವರಿಗೆ ಸೂಚಿಸಲಾಯಿತು.

**ಚಿಕ್ಕಮಗಳೂರು ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಚಿಕ್ಕಮಗಳೂರು:**

**ಮೂಡಿಗೆರೆ ಮತ್ತು ಶೃಂಗೇರಿ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಂಬಂಧ ಕೂಡಲೇ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

**ಕಡೂರು ಮತ್ತು ಬೀರೂರು** ಎರಡೂ ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ಒಟ್ಟುಗೂಡಿಸಿ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಾಧ್ಯತೆಯ ಬಗ್ಗೆ ಪರಿಶೀಲಿಸಲು ಸಹಾಯಕ ನಿರ್ದೇಶಕರು, ಚಿಕ್ಕಮಗಳೂರು ಇವರಿಗೆ ತಿಳಿಸಲಾಯಿತು.

**ತರೀಕೆರೆ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ಪ–1) ತಾತ್ಕಾಲಿಕ ಅನುಮೋದನೆಗಾಗಿ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರು ಚಿಕ್ಕಮಗಳೂರು ಇವರಿಗೆ ತಿಳಿಸಲಾಯಿತು.

**ಮಡಿಕೇರಿ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಮಡಿಕೇರಿ:**

**ಪೊನ್ನಂಪೇಟೆ, ಗೋಣಿಕೊಪ್ಪ** ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಂಬಂಧ ಕೂಡಲೇ ಕ್ರಮ ವಹಿಸಲು ಸಹಾಯಕ ನಿರ್ದೇಶಕರು, ಮಡಿಕೇರಿ ರವರಿಗೆ ತಿಳಿಸಲಾಯಿತು.

**ಸೋಮವಾರ ಪೇಟೆ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸುವ ಸಂಬಂಧ ಕಾಯ್ದೆಯನ್ವಯ ಕ್ರಮವಹಿಸಲು ಸೂಚಿಸಲಾಯಿತು.

**ವಿರಾಜಪೇಟೆ** ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪ–1)ಗೆ ತಾತ್ಕಾಲಿಕ ಅನುಮೋದನೆಗಾಗಿ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರು ಮಡಿಕೇರಿ ಇವರಿಗೆ ತಿಳಿಸಲಾಯಿತು.

**ಚಾಮರಾಜನಗರ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಚಾಮರಾಜನಗರ:**

**ಹನೂರು ಮತ್ತು ಯಳಂದೂರು** ಪಟ್ಟಣದ ಪಂಚಾಯಿತಿ ಪರಿಷ್ಕೃತ ಎಲ್ಲೆ ಘೋಷಿಸುವ ಸಂಬಂಧ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು, ಚಾಮರಾಜನಗರ ಇವರು ತಿಳಿಸಿದರು.

**ಮಂಡ್ಯ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಮಂಡ್ಯ:**

**ಶ್ರೀರಂಗಪಟ್ಟಣ** ಕೇಂದ್ರ ಕಛೇರಿಯಲ್ಲಿ ಸೂಚಿಸಿರುವ ನ್ಯೂನತೆಗಳನ್ನು ಸರಿಪಡಿಸಿ ಶ್ರೀರಂಗಪಟ್ಟಣ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ತಾತ್ಕಾಲಿಕ ಅನುಮೋದನೆಗೆ 01 ತಿಂಗಳೊಳಗಾಗಿ ಸಲ್ಲಿಸುವಂತೆ ಸೂಚಿಸಲಾಯಿತು.

**ಕೊಳ್ಳೇಗಾಲ** ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಅನುಮೋದನೆಗಾಗಿ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರು ಚಾಮರಾಜನಗರ ಇವರಿಗೆ ತಿಳಿಸಲಾಯಿತು.

**ನಾಗಮಂಗಲ, ಪಾಂಡವಪುರ, ಕೆ.ಆರ್. ಪೇಟೆ** ಪಟ್ಟಣಗಳ ಸ್ಥಳೀಯ ಯೋಜನಾ ಪ್ರದೇಶ ಘೋಷೊಸುವ ಸಂಬಂಧ ಕೂಡಲೇ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಹಾಯಕ ನಿರ್ದೇಶಕರು ಮಂಡ್ಯ ಇವರಿಗೆ ತಿಳಿಸಲಾಯಿತು.

**ಬೆಂಗಳೂರು ವಿಭಾಗ:**

**ಚಿತ್ರದುರ್ಗ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಚಿತ್ರದುರ್ಗ:**

**ಚಳ್ಳಕೆರೆ ಮತ್ತು ಹಿರಿಯೂರು** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗಳನ್ನು ಶೀಘ್ರವಾಗಿ ಸಿದ್ದಪಡಿಸಿ ದ್ವಿತೀಯ ತ್ರೈಮಾಸಿಕದೊಳಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಯಿತು.

**ಹೊಸದುರ್ಗ** ವಿಭಾಗಕ್ಕೆ ಮಹಾಯೋಜನೆಯನ್ನು ಸಿದ್ದಪಡಿಸಿ ಕೂಡಲೇ ಪ್ರಸ್ತಾವನೆ ಸಲ್ಲಸಲು ಸಹಾಯಕ ನಿರ್ದೇಶಕರು ಚಿತ್ರದುರ್ಗ ರವರಿಗೆ ತಿಳಿಸಲಾಯಿತು.

**ಕೋಲಾರ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಕೋಲಾರ:**

**ಶ್ರೀನಿವಾಸಪುರ** ಪಟ್ಟಣದ ಸ್ಥಳೀಯ ಸಂಸ್ಥೆಯ ಎಲ್ಲೆಯಲ್ಲಿ ನ್ಯೂನತೆಗಳಿದ್ದು, ಸದರಿ ನ್ಯೂನ್ಯತೆಗಳನ್ನು ಸರಿಪಡಿಸುವ ಕುರಿತು ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುವ ಬಗ್ಗೆ

ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವಂತೆ ಮೂಲ ನಕ್ಷೆಯನ್ನು ಕಾಲೋಚಿತಗೊಳಿಸಲು ಹಾಗೂ ಸಂಬಂಧಿಸಿದ ಮಾಹಿತಿಗಳನ್ನು ಕಲೆ ಹಾಕಲು ಸೂಚಿಸಲಾಯಿತು.

**ಮುಳಬಾಗಿಲು** ಪುರಸಭೆಯನ್ನು ನಗರಸಭೆಗೆ ಮೇಲ್ದರ್ಜೆಗೆ ಏರಿಸಲಾಗಿದ್ದು, ಸದರಿ ಎಲ್ಲೆಯ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿರುವುದರಿಂದ ಸದರಿ ಪಟ್ಟಣಕ್ಕೆ ಪ್ರತ್ಯೇಕ ಯೋಜನಾ ಪ್ರಾಧಿಕಾರ ರಚಿಸುವುದು ಸೂಕ್ತವಿರುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. 15 ದಿನಗಳೊಳಗಾಗಿ ಪ್ರಸ್ತಾವನೆಯನ್ನು ಸಿದ್ದಪಡಿಸಿ ಸಲ್ಲಿಸುವಂತೆ ಸೂಚಿಸಲಾಯಿತು.

**ಚಿಕ್ಕಬಳ್ಳಾಪುರ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಚಿಕ್ಕಬಳ್ಳಾಪುರ:**

**ಗುಡಿಬಂಡೆ, ಬಾಗೇಪಲ್ಲಿ** ಪಟ್ಟಣಗಳ ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಂಬಂಧ ಕೂಡಲೇ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಹಾಯಕ ನಿರ್ದೇಶಕರು ಚಿಕ್ಕಬಳ್ಳಾಪುರ ಇವರಿಗೆ ತಿಳಿಸಲಾಯಿತು.

**ತುಮಕೂರು ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ತುಮಕೂರು:**

**ಗುಬ್ಬಿ** ಪಟ್ಟಣದ ಸ್ಥಳೀಯ ಸಂಸ್ಥೆಯ ಎಲ್ಲೆಯಲ್ಲಿ ನ್ಯೂನತೆಗಳಿದ್ದು ಸದರಿ ನ್ಯೂನತೆಗಳನ್ನು ಸರಿಪಡಿಸುವ ಕುರಿತು ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುವುದಾಗಿ ಹಾಗೂ ಹುಳಿಯಾರು ಪಟ್ಟಣದ ಸ್ಥಳೀಯ ಸಂಸ್ಥೆಯ ಎಲ್ಲೆಯಲ್ಲಿಯೂ ಸಹ ನ್ಯೂನತೆಗಳಿರುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

**ಚಿಕ್ಕನಾಯಕನಹಳ್ಳಿ ಪಟ್ಟಣದ ಮಹಾಯೋಜನೆ ಮತ್ತು ಮಧುಗಿರಿ** ಪಟ್ಟಣಗಳ ಮಹಾಯೋಜನೆ (ಪ–1) ತಾತ್ಕಾಲಿಕ ಅನುಮೋದನೆಯಾಗಿದ್ದು, ಕೊರಟಗೆರೆ ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿರುತ್ತದೆ, ಆದರೆ ಸ್ಥಳೀಯ ಸಂಸ್ಥೆ ಎಲ್ಲೆಯಲ್ಲಿ ನ್ಯೂನತೆಗಳಿದ್ದು, ಸದರಿ ನ್ಯೂನ್ಯತೆಗಳನ್ನು ಸರಿಪಡಿಸುವ ಕುರಿತು ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುವುದಾಗಿ ಸಹಾಯಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

**ದಾವಣಗೆರೆ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ದಾವಣಗೆರೆ:**

**ನ್ಯಾಮತಿ** ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಂಬಂಧ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರು ದಾವಣಗೆರೆ ರವರಿಗೆ ತಿಳಿಸಲಾಯಿತು.

**ಮಲೆಬೆನ್ನೂರು** ಪಟ್ಟಣಕ್ಕೆ ಮಹಾಯೋಜನೆಯನ್ನು ಸಿದ್ದಪಡಿಸಿ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರು ದಾವಣಗೆರೆ ರವರಿಗೆ ತಿಳಿಸಲಾಯಿತು.

**ಜಗಳೂರು** ಪಟ್ಟಣಕ್ಕೆ ಮಹಾಯೋಜನೆಯನ್ನು ಸಿದ್ದಪಡಿಸಿ 01 ತಿಂಗಳೊಳಗಾಗಿ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರು ದಾವಣಗೆರೆ ರವರಿಗೆ ತಿಳಿಸಲಾಯಿತು.

**ಶಿವಮೊಗ್ಗ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಶಿವಮೊಗ್ಗ:**

**ಶಿರಾಳಕೊಪ್ಪ, ಹೊಸನಗರ** ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಂಬಂಧ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರು ಶಿವಮೊಗ್ಗ ರವರಿಗೆ ತಿಳಿಸಲಾಯಿತು.

**ಬೆಳಗಾವಿ ವಿಭಾಗ :**

**ಬೆಳಗಾವಿ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಬೆಳಗಾವಿ:**

**ಎಂ.ಕೆ. ಹುಬ್ಬಳ್ಳಿ, ಖಾನಾಪುರ** ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಕುರಿತಂತೆ ಪುರಸಭೆ ಗಡಿಯ ಪರಿಷ್ಕರಣೆ ಪ್ರಸ್ತಾವನೆಯು ದಿ:24-02-2020 ರಂದು ಸರ್ಕಾರಕ್ಕೆ ಸಲ್ಲಿಕೆಯಾಗಿರುತ್ತದೆ. **ಮುನವಳ್ಳಿ** ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಕುರಿತಂತೆ ಪುರಸಭೆ ಗಡಿಯ ಪರಿಷ್ಕರಣೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ಇವರು ತಿಳಿಸಿರುವುದಾಗಿ ಸಹಾಯಕ ನಿರ್ದೇಶಕರು ಬೆಳಗಾವಿ ಮಾಹಿತಿ ನೀಡಿದರು. ಈ ಕುರಿತು ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತು.

**ಸವದತ್ತಿ:** ಮಹಾಯೋಜನೆ (ಪ-I) ಅಂತಿಮ ದಿ:05-03-2020 ರಂದು ಸರ್ಕಾರದಿಂದ ಅನುಮೋದನೆಗೊಂಡಿದ್ದು, ಪ್ರಸ್ತುತ ದಿ:11-02-2022 ರಂದು ಪುರಸಭೆ ಗಡಿಯು ವಿಸ್ತರಣೆಗೊಂಡಿದ್ದು ಸದರಿ ಅಧಿಸೂಚನೆಯಲ್ಲಿ ನ್ಯೂನತೆಗಳಿರುವುದರಿಂದ ಗಡಿ ಪರಿಷ್ಕರಣೆ ಸರಿಪಡಿಸಲು ಕ್ರಮವಹಿಸಲಾಗುತ್ತಿದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಈ ಕುರಿತು ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತು.

**ಬೈಲಹೊಂಗಲ:** ಮಹಾಯೋಜನೆ (ಪ-II) ತಾತ್ಕಾಲಿಕ ನಕ್ಷೆಗಳನ್ನು ಕೇಂದ್ರ ಕಛೇರಿಯ ಪರಿಶೀಲನೆ ಸಮಯದಲ್ಲಿ ಸೂಚಿಸಿರುವ ನ್ಯೂನತೆಗಳನ್ನು ಸರಿಪಡಿಸಿ ಸಿದ್ಧಪಡಿಸಲಾಗಿದ್ದು, ಶೀಘ್ರದಲ್ಲಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಒಂದು ಸೆಟ್ ನಕ್ಷೆ ಹಾಗೂ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದೆಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಸದರಿ ಪ್ರಸ್ತಾವನೆಯನ್ನು ಒಂದು ತಿಂಗಳೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಲಾಯಿತು.

**ಯೋಜನಾ ಪ್ರಾಧಿಕಾರಗಳು:**

**ರಾಮದುರ್ಗ:** ಮಹಾಯೋಜನೆ (ಪ-II) ದಿ:24-03-2022 ರಂದು ಸರ್ಕಾರದಿಂದ ಅನುಮೋದನೆಗೊಂಡಿದ್ದು, ಅನುಮೋದಿತ ನಕ್ಷೆ ಮತ್ತು ವರದಿಯನ್ನು ಪಡೆದುಕೊಂಡು ಕೆ.ಟಿ.ಸಿ.ಪಿ ಕಾಯ್ದೆ ಕಲಂ 13(1) ಹಾಗೂ 13(2) ರನ್ವಯ ಕ್ರಮ ಜರುಗಿಸಲು ತಿಳಿಸಲಾಯಿತು.

**ಸಹಾಯಕ ನಿರ್ದೇಶಕರ ಕಛೇರಿ ನಿಪ್ಪಾಣಿ:**

**ಅಥಣಿ:** ಅಥಣಿ ಪುರಸಭೆ ಗಡಿಯ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ಅಣ್ಣಿಗೇರಿ:** ಅಣ್ಣಿಗೇರಿ ಪುರಸಭೆ ಗಡಿಯ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರಿಗೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ಮುಗಳಕೋಡ:** ಮುಗಳಕೋಡ ಪಟ್ಟಣ ಪಂಚಾಯ್ತಿಯ ಗಡಿಯ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರಿಗೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ಶೇಡಬಾಳ:** ಶೇಡಬಾಳ ಪಟ್ಟಣ ಪಂಚಾಯ್ತಿ ಗಡಿಯ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರಿಗೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ಕಂಕಣವಾಡಿ:** ಕಂಕಣವಾಡಿ ಪಟ್ಟಣ ಪಂಚಾಯತ ಗಡಿಯ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ಅರಭಾಂವಿ:** ಅರಭಾಂವಿ ಪಟ್ಟಣ ಪಂಚಾಯತ ಗಡಿಯ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ಸಂಕೇಶ್ವರ, ಹುಕ್ಕೇರಿ, ಚಿಂಚಲಿ, ಬೋರಗಾಂವ, ಐನಾಪೂರ, ಮಲ್ಲಾಪೂರ ಪಿ.ಜಿ., ನಾಗನೂರು, ಕಲ್ಲೋಳ್ಳಿ ಹಾಗೂ ಕಬ್ಬೂರ** ಪುರಸಭೆ/ಪಟ್ಟಣ ಪಂಚಾಯತಗಳ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳುವುದಾಗಿ ಯೋಜನಾ ನಿರ್ದೇಶಕರು, ಬೆಳಗಾವಿ ಇವರು ತಿಳಿಸಿರುವುದಾಗಿ ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ರಾಯಬಾಗ, ಕುಡಚಿ, ಉಗಾರಖುರ್ದ, ಕೊಣ್ಣುರು, ಸದಲಗಾ ಹಾಗೂ ಯಕ್ಸಂಬಾ** ಪಟ್ಟಣಗಳ ಗ್ರಾಮ ನಕ್ಷೆಗಳು ಲಭ್ಯವಿಲ್ಲದ ಕಾರಣ ಅನುಸೂಚಿ 'ಅ' ಹಾಗೂ ಅನುಸೂಚಿ 'ಬಿ' ಮತ್ತು ನಕ್ಷೆಗಳನ್ನು ತಯಾರಿಸಿ ಪುರಸಭೆ/ಪಟ್ಟಣ ಪಂಚಾಯತಗಳಿಗೆ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ. ಸದರಿ ಗ್ರಾಮ ನಕ್ಷೆಗಳನ್ನು ಪೂರೈಸುವಂತೆ ಜಂಟಿ ನಿರ್ದೇಶಕರು, ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ಬೆಳಗಾವಿ ರವರಿಗೆ ದಿ:03-09-2020 ರಂದು ಪತ್ರ ಬರೆಯಲಾಗಿದೆ ಎಂದು ಸಹಾಯಕ ನಿರ್ದೇಶಕರು ನಿಪ್ಪಾಣಿ ಇವರು ತಿಳಿಸಿದರು.

**ಮೇಲ್ಕಂಡ ಪ್ರಸ್ತಾವನೆಗಳ ಕುರಿತು ಪರಿಶೀಲಿಸಲು ನಿಪ್ಪಾಣಿ ಮತ್ತು ಬೆಳಗಾವಿ ಸಹಾಯಕ ನಿರ್ದೇಶಕರ ಕಛೇರಿಗಳಿಗೆ ಒಂದು ವಾರದ ಪ್ರವಾಸ ಕಾರ್ಯಕ್ರಮವನ್ನು ನಿಗಧಿಪಡಿಸುವಂತೆ ನಿರ್ದೇಶಕರು ಸೂಚಿಸಿದರು.**

**ಮೂಡಲಗಿ:** ದಿ:08-12-2021 ಮತ್ತು 09-12-2021 ರಂದು ಮಹಾಯೋಜನೆ (ತಾತ್ಕಾಲಿಕ) ಯನ್ನು ಕೇಂದ್ರ ಕಛೇರಿಯ ಪರಿಶೀಲನೆಗೆ ಒಳಪಡಿಸಿದ್ದು, ಕೆಲವೊಂದು ನ್ಯೂನ್ಯತೆಗಳನ್ನು ಸರಿಪಡಿಸಿ

ಸಲ್ಲಿಸಲು ಸೂಚಿಸಲಾಗಿದ್ದು, ಶೀಘ್ರದಲ್ಲೇ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಸಂಬಂಧ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದು ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ಚಿಕ್ಕೋಡಿ :** ದಿ:12-11-2020 ಮತ್ತು 13-11-2020 ರಂದು ಮಹಾಯೋಜನೆ (ತಾತ್ಕಾಲಿಕ) ಯನ್ನು ಕೇಂದ್ರ ಕಛೇರಿಯ ಪರಿಶೀಲನೆಗೆ ಒಳಪಡಿಸಿದ್ದು, ಕೆಲವೊಂದು ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸಲು ಸೂಚಿಸಲಾಗಿದ್ದು, ಶೀಘ್ರದಲ್ಲೇ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಸಂಬಂಧ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದು ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ಚಿಕ್ಕೋಡಿ, ಮೂಡಲಗಿ** ಪಟ್ಟಣಗಳ ಮಹಾಯೋಜನೆ (ತಾತ್ಕಾಲಿಕ) ಯನ್ನು ಮೂರು ತಿಂಗಳ ಒಳಗಾಗಿ ಸಿದ್ದಪಡಿಸಿ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಕರು ಸೂಚಿಸಿದರು.

**ಯೋಜನಾ ಪ್ರಾಧಿಕಾರಗಳು:**

**ನಿಪ್ಪಾಣಿ:** ಮಹಾಯೋಜನೆ ಪರಿಷ್ಕೃತ-II (ತಾತ್ಕಾಲಿಕ)ರ ಮೂಲ ನಕ್ಷೆಯನ್ನು ಸಿದ್ದಪಡಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು.

**ಗೋಕಾಕ:** ಮಹಾಯೋಜನೆ ಪರಿಷ್ಕೃತ-II (ತಾತ್ಕಾಲಿಕ) ಸಂಬಂಧಿಸಿದಂತೆ ಕೇಂದ್ರ ಕಛೇರಿಯಿಂದ ಸೂಚಿಸಿದಂತೆ ನಕ್ಷೆಗಳಲ್ಲಿ ನ್ಯೂನತೆಗಳನ್ನು ಸರಿಪಡಿಸಿ ಸಾಪ್ಟ್ ಕಾಪಿಗಳನ್ನು ಸಿದ್ಧಪಡಿಸಲಾಗಿದ್ದು, ಶೀಘ್ರದಲ್ಲಿಯೇ ನಕ್ಷೆಗಳನ್ನು ಕೇಂದ್ರ ಕಛೇರಿಯ ಪರಿಶೀಲನೆಗೆ ಸಲ್ಲಿಸಲಾಗುವುದೆಂದು ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು. ಒಂದು ತಿಂಗಳೊಳಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಯಿತು.

**ಧಾರವಾಡ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಧಾರವಾಡ:**

**ಅಳ್ನಾವರ ಮತ್ತು ಕಲಘಟಗಿ** ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಕುರಿತಂತೆ ಪುರಸಭೆ ಗಡಿಯ ಪರಿಷ್ಕರಣೆ ಪ್ರಸ್ತಾವನೆಯು ದಿ:31-08-2021 ಮತ್ತು 21-08-2021 ರಂದು ಮುಖ್ಯಾಧಿಕಾರಿಗಳಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಕೆಯಾಗಿರುವುದಾಗಿ ಹಾಗೂ ಅಣ್ಣಿಗೇರಿ ಪುರಸಭೆ ಗಡಿಯ ಪರಿಷ್ಕರಣೆ ಕುರಿತು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ಮುಖ್ಯಾಧಿಕಾರಿಗಳ ಕಛೇರಿಯ ಮುಖೇನ ಶೀಘ್ರದಲ್ಲಿ ಸಲ್ಲಿಸುವುದಾಗಿ ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಈ ಕುರಿತು ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತು.

**ಕುಂದಗೋಳ:** ಕುಂದಗೋಳ ಪಟ್ಟಣಕ್ಕೆ ದಿ:08-02-2018 ರಂದು ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿರುತ್ತದೆ ಆದರೆ ಜಿಲ್ಲಾಧಿಕಾರಿಗಳ ವಾರ್ಡ್ ವಿಂಗಡಣೆಯ ಅಧಿಸೂಚನೆಗೂ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಗೂ ವ್ಯತ್ಯಾಸವಿರುವುದರಿಂದ ಪಟ್ಟಣ ಪಂಚಾಯಿತಿ ಎಲ್ಲೆಯನ್ನು ಪರಿಷ್ಕರಿಸುವ ಸಂಬಂಧ ಪ್ರಸ್ತಾವನೆಯನ್ನು ದಿ:25-02-2021 ರಂದು ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಲಾಗಿದ್ದು, ಸಲ್ಲಿಸಲಾಗಿರುವ ಪ್ರಸ್ತಾವನೆಯ ಎಲ್ಲೆಗೆ ಮೂಲ ನಕ್ಷೆ ಕಾಲೋಚಿತಗೊಳಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ನವಲಗುಂದ:** ನವಲಗುಂದ ಮಹಾಯೋಜನೆ (ಪ-I) ತಾತ್ಕಾಲಿಕ ಸಿದ್ಧಪಡಿಸಿ ಕೇಂದ್ರ ಕಛೇರಿಯ ಪರಿಶೀಲನೆಗೆ ಸಲ್ಲಿಸಿದ್ದ ಸಂದರ್ಭದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆ ಹಾಗೂ ಪುರಸಭೆ ಎಲ್ಲೆಗೂ ತಾಳೆಯಾಗದಿರುವುದನ್ನು ಗಮನಿಸಲಾಗಿದ್ದು, ಅದರಂತೆ ಪುರಸಭೆ ಎಲ್ಲೆ ಕುರಿತು ಪರಿಷ್ಕೃತ ಅಧಿಸೂಚನೆ ಹೊರಡಿಸುವ ಪ್ರಸ್ತಾವನೆಯು ಪ್ರಸ್ತುತ ಜಿಲ್ಲಾಧಿಕಾರಿಗಳ ಕಛೇರಿಯಿಂದ ದಿ:18-09-2021 ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರಿಗೆ ಸಲ್ಲಿಕೆಯಾಗಿರುವುದಾಗಿ ಸಹಾಯಕ ನಿರ್ದೇಶಕರು, ಧಾರವಾಡ ಇವರು ತಿಳಿಸಿದರು.

**<u>ಗದಗ ಜಿಲ್ಲೆ:</u>**

**<u>ಸಹಾಯಕ ನಿರ್ದೇಶಕರ ಕಛೇರಿ ಗದಗ:</u>**

**ಮುಂಡರಗಿ, ಮುಳಗುಂದ, ನರೇಗಲ್, ಗಜೇಂದ್ರಗಡ** ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಕುರಿತಂತೆ ಪುರಸಭೆ ಗಡಿಯ ಪರಿಷ್ಕರಣೆ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳಿಂದ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗಿರುತ್ತದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಈ ಕುರಿತು ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತು.

**ರೋಣ:** ಮಹಾಯೋಜನೆ (ತಾತ್ಕಾಲಿಕ) ನಕ್ಷೆ ಕುರಿತು ದಿ:29-10-2021 ರಂದು ಕೇಂದ್ರ ಕಛೇರಿಯ ಪರಿಶೀಲನೆ ಸಮಯದಲ್ಲಿ ಸೂಚಿಸಲಾದ ನ್ಯೂನತೆಗಳನ್ನು ಸರಿಪಡಿಸಲಾಗಿದ್ದು, ಶೀಘ್ರದಲ್ಲಿಯೇ ಒಂದು ಸೆಟ್ ನಕ್ಷೆ ಮತ್ತು ವರದಿ ಪ್ರತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದೆಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಒಂದು ತಿಂಗಳೊಳಗಾಗಿ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲು ಸಹಾಯಕ ನಿರ್ದೇಶಕರಿಗೆ ಸೂಚಿಸಲಾಯಿತು.

**ಶಿರಹಟ್ಟಿ:** ಶಿರಹಟ್ಟಿ ಪಟ್ಟಣಕ್ಕೆ ದಿ:27-05-2014 ರಂದು ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿದ್ದು, ಆದರೆ ಸದರಿ ಅಧಿಸೂಚನೆಯಲ್ಲಿ ಅನುಬಂಧ-1 ಹಾಗೂ 2 ಒಳಗೊಂಡಿರುವುದಿಲ್ಲ. ಪ್ರಸ್ತುತ ಶಿರಹಟ್ಟಿ ಪಟ್ಟಣದ ಪಟ್ಟಣ ಪಂಚಾಯಿತಿ ಗಡಿ ವಿವರಣೆ ಕುರಿತು ಅನುಬಂಧ-1 ಹಾಗೂ 2 ಪರಿಷ್ಕೃತ ಅಧಿಸೂಚನೆ ಹೊರಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ಲಕ್ಷ್ಮೇಶ್ವರ:** ಮಹಾಯೋಜನೆ (ಪ-II) ತಾತ್ಕಾಲಿಕ ಸಿದ್ಧಪಡಿಸುವ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 10(1) ರಂತೆ ಅಗತ್ಯ ಕ್ರಮವಹಿಸಲು ದಿ:25-02-2022 ರಂದು ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಮುಖ್ಯಾಧಿಕಾರಿಗಳೊಡನೆ ಸಂಪರ್ಕಿಸಿ ಮಹಾಯೋಜನೆ ಸಿದ್ಧಪಡಿಸುವ ಸಂಬಂಧ ಅಗತ್ಯ ಕ್ರಮವಹಿಸಲು ಸಹಾಯಕ ನಿರ್ದೇಶಕರಿಗೆ ತಿಳಿಸಲಾಯಿತು.

**<u>ಹಾವೇರಿ ಜಿಲ್ಲೆ:</u>**

**<u>ಸಹಾಯಕ ನಿರ್ದೇಶಕರ ಕಛೇರಿ ಹಾವೇರಿ:</u>**

**ಶಿಗ್ಗಾಂವ:** ಶಿಗ್ಗಾಂವ ಪಟ್ಟಣಕ್ಕೆ ದಿ:23-12-2021 ರಂದು ಅಧಿಸೂಚನೆಯಾಗಿರುವ ಪುರಸಭೆ ಎಲ್ಲೆಯಲ್ಲಿ ನ್ಯೂನತೆಗಳಿದ್ದು ಸದರಿ ನ್ಯೂನ್ಯತೆಗಳನ್ನು ಸರಿಪಡಿಸಲು ದಿ:11-02-2022 ರಂದು ಹಾಗೂ ಹಿರೇಕೆರೂರು, ಗುತ್ತಲ ಮತ್ತು ಬಂಕಾಪುರ ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆ

ಕುರಿತಂತೆ ಸ್ಥಳೀಯ ಸಂಸ್ಥೆಯ ಗಡಿಯ ಪರಿಷ್ಕರಣೆ ಕುರಿತು ಶೀಘ್ರವಾಗಿ ಕ್ರಮ ಕೈಗೊಳ್ಳಲು ದಿ:17-01-2022 ರಲ್ಲಿ ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಈ ಕುರಿತು ಮುಖ್ಯಾಧಿಕಾರಿಗಳಿಗೆ ಅರೆ ಸರ್ಕಾರಿ ಪತ್ರ ಬರೆಯಲು ಸೂಚಿಸಲಾಯಿತು.

**ಹಾನಗಲ್ಲ:** ಮಹಾಯೋಜನೆ (ತಾತ್ಕಾಲಿಕ) ಕುರಿತು ಸಿದ್ಧಪಡಿಸಲಾಗಿದ್ದು, ಸರ್ಕಾರದ ಅನುಮೋದನೆ ಸಂಬಂಧ ಶೀಘ್ರದಲ್ಲಿಯೇ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಒಂದು ತಿಂಗಳೊಳಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಲಾಯಿತು.

**ಬ್ಯಾಡಗಿ:** ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಂಬಂಧ ದಿ:02-12-2021 ರಂದು ವಲಯ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ಸವಣೂರು:** ಮಹಾಯೋಜನೆ (ಪ-I) ತಾತ್ಕಾಲಿಕ ಸಿದ್ಧಪಡಿಸಿ ದಿ:17-03-2022 ರಂದು ವಲಯ ಕಛೇರಿ ಪರಿಶೀಲನೆಗೆ ಸಲ್ಲಿಸಲಾಗಿದ್ದು, ಶೀಘ್ರದಲ್ಲಿಯೇ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದೆಂದು ತಿಳಿಸಿದರು. ಒಂದು ವಾರದೊಳಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಲಾಯಿತು.

**ಬಾಗಲಕೋಟೆ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಜಮಖಂಡಿ:**

**ಬೆಳಗಲಿ:** ಪಟ್ಟಣ ಪಂಚಾಯತ್ ಪರಿಷ್ಕೃತ ಎಲ್ಲೆಯು ದಿ:20-03-2021 ರಂದು ಸರ್ಕಾರದಿಂದ ಅಧಿಸೂಚನೆಗೊಂಡಿದ್ದು, ಸದರಿ ಅಧಿಸೂಚನೆಯಲ್ಲಿ ಮಹಾಲಿಂಗಪುರ ಸ್ಥಳೀಯ ಯೋಜನಾ ಪ್ರದೇಶದ ಕೆಲವು ಸ.ನಂ.ಗಳು ಒಳಗೊಂಡಿರುವುದರಿಂದ ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಕುರಿತಂತೆ ಕ್ರಮವಹಿಸಲು ವಿಳಂಬವಾಗುತ್ತಿದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ತೇರದಾಳ:** ಮಹಾಯೋಜನೆ ತಯಾರಿಕೆ ಸಂಬಂಧ ಟೆಂಡರ್ ಕರೆಯಲು ದಿ:22-03-2022 ರಂದು ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಮೊದಲನೇ ತ್ರೈಮಾಸಿಕದೊಳಗೆ ಮಹಾಯೋಜನೆ ಸಿದ್ಧಪಡಿಸಿ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.

**ಮಹಾಲಿಂಗಪುರ:** ಮಹಾಲಿಂಗಪುರ ಸ್ಥಳೀಯ ಯೋಜನಾ ಪ್ರದೇಶದ ಕೆಲವು ಸ.ನಂ.ಗಳು ಬೆಳಗಲಿ ಪಟ್ಟಣ ಪಂಚಾಯತ್ ಪರಿಷ್ಕೃತ ಎಲ್ಲೆಯಲ್ಲಿ ಒಳಗೊಂಡಿರುವುದರಿಂದ ಮಹಾಲಿಂಗಪುರ ಪುರಸಭೆ ವ್ಯಾಪ್ತಿಯನ್ನು ಪರಿಷ್ಕರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಸದರಿ ಉರಸಭೆ ವ್ಯಾಪ್ತಿಯ ಪರಿಷ್ಕಕಣೆಗೊಂಡ ಕೂಡಲೇ ಸ್ಥಳೀಯ ಯೋಜನಾ ಪ್ರದೇಶವನ್ನು ಪರಿಷ್ಕರಿಸಿ ನಂತರ ಮಹಾ ಯೋಜನೆ ಪರಿಷ್ಕರಣೆ ಕಾರ್ಯ ಕೈಗೊಳ್ಳಲು ಸೂಚಿಸಲಾಯಿತು.

**ಯೋಜನಾ ಪ್ರಾಧಿಕಾರಗಳು:**

**ಜಮಖಂಡಿ ಮತ್ತು ರಬಕವಿ-ಬನಹಟ್ಟಿ:** ಮೂಲನಕ್ಷೆ ಕಾಲೋಚಿತಗೊಳಿಸುವ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿಯೇ ಮಹಾಯೋಜನೆ (ಪ-II) ತಾತ್ಕಾಲಿಕ ಸಿದ್ಧಪಡಿಸಿ ವಲಯ ಕಛೇರಿಯ ಪರಿಶೀಲನೆಗೆ

ಸಲ್ಲಿಸಲಾಗುವುದು ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ತೃತೀಯ ತ್ರೈಮಾಸಿಕದೊಳಗೆ ಮಹಾಯೋಜನೆ ಸಿದ್ಧಪಡಿಸಿ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.

**ಮುಧೋಳ:** ದಿ:03-06-2021 ರಂದು ಮಹಾಯೋಜನೆ (ಪ-I) ತಾತ್ಕಾಲಿಕ ಸರ್ಕಾರದಿಂದ ಅನುಮೋದನೆಗೊಂಡಿದ್ದು, ಕೆ.ಟಿ.ಸಿ.ಪಿ. ಕಾಯ್ದೆ ಕಲಂ 13(1) ಹಾಗೂ 13(2)ರನ್ವಯ ಕ್ರಮವಹಿಸಲಾಗಿದ್ದು, ಶೀಘ್ರದಲ್ಲಿಯೇ ಮಹಾಯೋಜನೆ ಅಂತಿಮ ಸಿದ್ಧಪಡಿಸಿ ಕೇಂದ್ರ ಕಛೇರಿಯ ಪರಿಶೀಲನೆಗೆ ಸಲ್ಲಿಸಲಾಗುವುದೆಂದು ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು.

**ಸಹಾಯಕ ನಿರ್ದೇಶಕರ ಕಛೇರಿ ಬಾಗಲಕೋಟೆ:**

**ಅಮೀನಗಡ:** ಪಟ್ಟಣ ಪಂಚಾಯಿತಿ ಪರಿಷ್ಕೃತ ಎಲ್ಲೆ ಕುರಿತು ಪ್ರಸ್ತಾವನೆಯು ದಿ:25-06-2019 ರಂದು ಸರ್ಕಾರಕ್ಕೆ ಸಲ್ಲಿಕೆಯಾಗಿರುತ್ತದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ಹುನಗುಂದ ಮತ್ತು ಕೆರೂರು:** ಹುನಗುಂದ ಪಟ್ಟಣದ ಮಹಾಯೋಜನೆಯು ದಿ:23-03-2022 ರಂದು ಮತ್ತು ಕೆರೂರ ಪಟ್ಟಣದ ಮಹಾಯೋಜನೆಯು ದಿ:24-03-2022 ರಂದು ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿದ್ದು, ಅನುಮೋದಿತ ನಕ್ಷೆ ಮತ್ತು ವರದಿಯನ್ನು ಪಡೆದುಕೊಂಡು ಕೆ.ಟಿ.ಸಿ.ಪಿ ಕಾಯ್ದೆ ಕಲಂ 13(2) ರನ್ವಯ ಕ್ರಮ ಕೈಗೊಂಡು ಸದರಿ ಕಾಯ್ದೆ ಕಲಂ 13(3) ರನ್ವಯ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ತಿಳಿಸಲಾಯಿತು.

**ಬೀಳಗಿ:** ಹಾಲಿ ಭೂ-ಬಳಕೆ ನಕ್ಷೆಗಳನ್ನು ತಯಾರಿಸಿದ್ದು, ಮಹಾ ಯೋಜನೆಯನ್ನು ಶೀಘ್ರದಲ್ಲಿ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸುವುದಾಗಿ ಸಹಾಯಕ ನಿರ್ದೇಶಕರು, ಬಾಗಲಕೋಟೆ ಇವರಿಗೆ ತಿಳಿಸಲಾಯಿತು.

**ಕಮತಗಿ:** ಕಮತಗಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆಯನ್ನು ಶೀಘ್ರದಲ್ಲಿ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲಾಗುವುದೆಂದು ಸಹಾಯಕ ನಿರ್ದೇಶಕರು ತಿಳಿಸಿದರು. ಸದರಿ ಮಹಾ ಯೋಜನೆಯನ್ನು ದ್ವಿತೀಯ ತ್ರೈಮಾಸಿಕದಲ್ಲಿ ಸಲ್ಲಿಸಲು ತಿಳಿಸಲಾಯಿತು.

**ಗುಳೇದಗುಡ್ಡ:** ಮಹಾಯೋಜನೆ (ಪ-1) ತಯಾರಿಸುವ ಸಲುವಾಗಿ ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿ ಕೋರಿ ಪತ್ರ ಬರೆಯಲಾಗಿದೆ. ಹಾಗೂ ಕಲಂ 10ರ ಪ್ರಕಾರ ಮಹಾಯೋಜನೆ ಪ-1 ತಯಾರಿಕೆಗಾಗಿ ಸಾರ್ವಜನಿಕರಿಂದ ಸಲಹೆ/ಸೂಚನೆಗಳನ್ನು ಆಹ್ವಾನಿಸಲು ಪುರಸಭೆ ಯೋಜನಾ ಪ್ರಾಧಿಕಾರದಲ್ಲಿ ಸಭೆ ಜರುಗಿಸಿ ಕ್ರಮ ಕೈಗೊಂಡು ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವುದಾಗಿ ಸಹಾಯಕ ನಿರ್ದೇಶಕರು ತಿಳಿಸಿದರು. ಈ ಕುರಿತು ಶೀಘ್ರವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**ಉತ್ತರ ಕನ್ನಡ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ಕಾರವಾರ:**

**ಅಂಕೋಲಾ:** ಗಡಿಯ ಪರಿಷ್ಕರಣೆ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳಿಂದ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗಿರುತ್ತದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಈ ಕುರಿತು ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತು.

**ಜಾಲಿ:** ಗಡಿಯ ಪರಿಷ್ಕರಣೆ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇರುವುದಾಗಿ ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು.

**ಹೊನ್ನಾವರ:** ಮಹಾಯೋಜನೆ (ತಾತ್ಕಾಲಿಕ) ಸಂಬಂಧ ಹಾಲಿ ರಸ್ತೆ ಪರಿಚಲನೆ ನಕ್ಷೆ ಹಾಗೂ ಹಾಲಿ ಭೂ ಬಳಕೆ ನಕ್ಷೆ ಸಿದ್ಧಪಡಿಸುವಿಕೆ ಕಾರ್ಯ ಪ್ರಗತಿಯಲ್ಲಿದೆ ಎಂದು ಸಹಾಯಕ ನಿರ್ದೇಶಕರು ತಿಳಿಸಿದರು. ಸದರಿ ಮಯಾ ಯೋಜನೆಯಲ್ಲಿ 03 ತಿಂಗಳೊಳಗಾಗಿ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲು ತಿಳಿಸಲಾಯಿತು.

**ಭಟ್ಕಳ:** ಮಹಾಯೋಜನೆ(ಪ–I)(ತಾತ್ಕಾಲಿಕ)ಯನ್ನು ಸಿದ್ಧಪಡಿಸಿ ದಿ:15–02–2022 ರಂದು ಕೇಂದ್ರ ಕಛೇರಿಯ ಪರಿಶೀಲನೆಗೆ ಸಲ್ಲಿಸಲಾಗಿದ್ದು, ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಮಹಾಯೋಜನೆ ನಕ್ಷೆ ಮತ್ತು ವರದಿಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವ ಸಂಬಂಧ ಶೀಘ್ರದಲ್ಲಿಯೇ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದೆಂದು ಸಹಾಯಕ ನಿರ್ದೇಶಕರು ತಿಳಿಸಿದರು. ಒಂದು ತಿಂಗಳೊಳಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.

**ಕುಮಟ:** ಮಹಾಯೋಜನೆ(ಪ–I)(ತಾತ್ಕಾಲಿಕ)ಯನ್ನು ಸಿದ್ಧಪಡಿಸಿ ದಿ:07–10–2021 ರಂದು ವಲಯ ಕಛೇರಿಯ ಪರಿಶೀಲನೆಗೆ ಸಲ್ಲಿಸಲಾಗಿದ್ದು, ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಮಹಾಯೋಜನೆ ನಕ್ಷೆ ಮತ್ತು ವರದಿಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವ ಸಂಬಂಧ ಶೀಘ್ರದಲ್ಲಿಯೇ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದೆಂದು ಸಹಾಯಕ ನಿರ್ದೇಶಕರು ತಿಳಿಸಿದರು. ಒಂದು ತಿಂಗಳೊಳಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.

**<u>ಸಹಾಯಕ ನಿರ್ದೇಶಕರ ಕಛೇರಿ ಶಿರಸಿ:</u>**

**ಯಲ್ಲಾಪುರ ಮತ್ತು ಮುಂಡಗೋಡ**: ಯಲ್ಲಾಪುರ ಮತ್ತು ಮುಂಡಗೋಡ ಪಟ್ಟಣ ಪಂಚಾಯತಿ ಗಡಿಯ ಎಲ್ಲೆಯ ಪರಿಷ್ಕರಣೆಯ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ಪರಿಶೀಲಿಸಿ ಸದರಿ ಗಡಿ ಪರಿಷ್ಕರಣೆಗೆ ಸೂಕ್ತ ಸಕಾರಣಗಳನ್ನು ಕೋರಿದ್ದು, ಈ ಕಾರ್ಯ ಪರಿಷ್ಕರಿಸಲಾಗುತ್ತಿರುವುದಾಗಿ ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಈ ಕುರಿತು ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತು.

**ಸಿದ್ದಾಪುರ:** ಹಾಲಿ ಭೂ ಬಳಕೆ ನಕ್ಷೆ ಹಾಗೂ ಮೂಲನಕ್ಷೆ ಸಿದ್ದಪಡಿಸಿ ದಿ:30–03–2022 ರಂದು ನಕ್ಷೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗಿದ್ದ ಸಮಯದಲ್ಲಿ ಕೆಲವೊಂದು ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಮುಂದಿನ ಹಂತದಲ್ಲಿ ಸಲ್ಲಿಸಬೇಕಾದ ಪ್ರಸ್ತಾಪಿತ ರಸ್ತೆ ಪರಿಚಲನೆ ನಕ್ಷೆ ಮತ್ತು ಪ್ರಸ್ತಾವಿತ ಭೂ ಉಪಯೋಗ ನಕ್ಷೆಗಳನ್ನು ಸಿದ್ದಪಡಿಸಿ ಪರಿಶೀಲನೆಗೆ ಸಲ್ಲಿಸಲು ತಿಳಿಸಲಾಗಿದ್ದು, ಪ್ರಸ್ತಾವನೆಯನ್ನು ಸಿದ್ದಪಡಿಸಿ ಶೀಘ್ರದಲ್ಲೇ ಪರಿಶೀಲನೆಗಾಗಿ ವಲಯ ಕಚೇರಿ ಹಾಗೂ ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದು ಎಂದು ಸಹಾಯಕ ನಿರ್ದೇಶಕರು ತಿಳಿಸಿದರು.

**ಹಳಿಯಾಳ:** ಸ್ಥಳೀಯ ಯೋಜನಾ ಪ್ರದೇಶದ ಗಡಿ ಪರಿಷ್ಕರಣೆ ಕುರಿತು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ದಿ:03–03–2021 ರಂದು ಕೇಂದ್ರ ಕಛೇರಿಗೆ ಸಲ್ಲಿಸಲಾಗಿರುತ್ತದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಕೇಂದ್ರ ಕಛೇರಿಯಿಂದ ದಿ:07–09–2021 ರಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುವುದರಿಂದ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶ ಸರ್ಕಾರದಿಂದ ಘೋಷಣೆಯಾದ ನಂತರ ಮಹಾಯೋಜನೆ ಸಿದ್ದಪಡಿಸುವಿಕೆ ಸಂಬಂಧ ಕ್ರಮ ವಹಿಸಲು ಸೂಚಿಸಲಾಯಿತು.

**ದಾಂಡೇಲಿ:**ದಿನಾಂಕ:-11-12-2018 ರಂದು ಹಾಗೂ ದಿನಾಂಕ:-19-01-2019 ರಂದು ಹಾಲಿ ಭೂ ಬಳಕೆ ನಕ್ಷೆ ಹಾಗೂ ಅಧ್ಯಯನ ನಕ್ಷೆಗಳನ್ನು ಪರಿಶೀಲನೆಗಾಗಿ ವಲಯ ಕಛೇರಿ ಧಾರವಾಡಕ್ಕೆ ಸಲ್ಲಿಸಲಾಗಿತ್ತು, ಅದರಂತೆ ವಲಯ ಕಛೇರಿಯಲ್ಲಿ ನಕ್ಷೆಗಳನ್ನು ಪರಿಶೀಲಿಸಿ ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸಲು ಸೂಚಿಸಲಾಗಿದ್ದು, ಸದರಿ ನ್ಯೂನ್ಯತೆಗಳನ್ನು ಸರಿಪಡಿಸುವ ಹಾಗೂ ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಈ ಕುರಿತು ಶೀಘ್ರವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**ವಿಜಯಪುರ ಜಿಲ್ಲೆ:**

**ಸಹಾಯಕ ನಿರ್ದೇಶಕರ ಕಛೇರಿ ವಿಜಯಪುರ:**

**ಆಲಮೇಲ. ಚಡಚಣ, ನಿಡಗುಂದಿ, ಕೋಲಾರ, ಮನಗೂಳಿ, ದೇವರ ಹಿಪ್ಪರಗಿ, ತಿಕೋಟಾ, ನಾಲತವಾಡ:**ದಿನಾಂಕ:-20-01-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಆಲಮೇಲ. ಚಡಚಣ, ನಿಡಗುಂದಿ, ಕೋಲ್ಹಾರ, ಮನಗೂಳಿ, **ತಿಕೋಟಾ,** ದೇವರ ಹಿಪ್ಪರಗಿ ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಂಬಂಧ ಶೀಘ್ರವಾಗಿ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಎಲ್ಲಾ ಮುಖ್ಯಾಧಿಕಾರಿಗಳಿಗೆ ಸೂಚಿಸಿದ್ದು, ಈ ಸಂಬಂಧ ಮಾನ್ಯ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಕೋಶ ವಿಜಯಪುರ ರವರ ಕಚೇರಿಗೆ ಭೇಟಿ ನೀಡಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಾಧಿಕಾರಿಗಳಿಗೆ ಸೂಚಿಸಲು ಜಿಲ್ಲಾಧಿಕಾರಿಗಳಿಗೆ ಕೋರಲಾಗಿದೆ ಎಂದು ಸಹಾಯಕ ನಿರ್ದೇಶಕರು ತಿಳಿಸಿದರು. ಈ ಕುರಿತು ಶೀಘ್ರವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**ಬಸವನಬಾಗೇವಾಡಿ ಮತ್ತು ತಾಳಿಕೋಟೆ:** ಹಾಲಿ ಭೂಬಳಕೆ ನಕ್ಷೆ, Study Maps ಹಾಗೂ ರಸ್ತೆ ಪರಿಚಲನಾ ನಕ್ಷೆ ಗಳನ್ನು ಸಿದ್ಧಪಡಿಸಿ ದಿ:07-08-2021 ರಂದು ಕೇಂದ್ರ ಕಚೇರಿಯಲ್ಲಿ ಪರಿಶೀಲನೆಗೆ ಸಲ್ಲಿಸಲಾಗಿ ಕೆಲವೊಂದು ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸಲು ಸೂಚಿಸಿದ್ದು, ಸದರಿ ನ್ಯೂನ್ಯತೆಗಳನ್ನು ಸರಿಪಡಿಸಿ ರಸ್ತೆ ಪರಿಚಲನೆ ಮತ್ತು ಹಾಲಿ ಭೂ ಉಪಯೋಗಗಳನ್ನು ಅಳವಡಿಸಲಾಗುತ್ತಿದ್ದು ಶೀಘ್ರದಲ್ಲಿಯೇ ಕೇಂದ್ರ ಕಛೇರಿಗೆ ಪರಿಶೀಲನೆಗೆ ಹಾಜರಾಗಲಾಗುವುದು ಎಂದು ಸಹಾಯಕ ನಿರ್ದೇಶಕರು ತಿಳಿಸಿದರು.

**ಮುದ್ದೇಬಿಹಾಳ:** ಪುರಸಭೆ ಗಡಿಯನ್ನು ಪರಿಷ್ಕರಿಸುವ ಸಂಬಂಧ ಪ್ರಸ್ತಾವನೆಯನ್ನು ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ರವರ ಮುಖಾಂತರ ದಿ:25-10-2016 ರಂದು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರಿಗೆ ಸಲ್ಲಿಸಲಾಗಿದ್ದು, ಸರ್ಕಾರದಿಂದ ಪುರಸಭೆ ಗಡಿಯ ಅಧಿಸೂಚನೆ ಬಂದ ನಂತರ ಮಹಾಯೋಜನೆ (ಪ-I) (ತಾತ್ಕಾಲಿಕ) ತಯಾರಿಸುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲಾಗುದು ಎಂದು ಸಹಾಯಕ ನಿರ್ದೇಶಕರು ತಿಳಿಸಿದರು.

**ಸಿಂದಗಿ :** ಸಿಂದಗಿ ಪುರಸಭೆ ಎಲ್ಲೆಯನ್ನು ವಿಸ್ತರಿಸಿ ದಿ:05-03-2021 ರಂದು ಸರ್ಕಾರವು ಅಧಿಸೂಚನೆ ಹೊರಡಿಸಿದ್ದು ಸದರಿ ಪರಿಷ್ಕೃತ ಪುರಸಭೆ ಪ್ರದೇಶಕ್ಕೆ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯು ಘೋಷಣೆಯಾದ ನಂತರ ಮಹಾಯೋಜನೆ (ಪ-II) (ತಾತ್ಕಾಲಿಕ) ತಯಾರಿಕೆ ಸಂಬಂಧ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ನಿರ್ದೇಶಕರು ತಿಳಿಸಿದರು.

**ನಗರಾಭಿವೃದ್ಧಿ ಪ್ರಾಧಿಕಾರಗಳು:**

**ಹಾವೇರಿ:** ಮಹಾಯೋಜನೆ (ಪ–II) ತಾತ್ಕಾಲಿಕ ಸಿದ್ಧಪಡಿಸುವ ಸಂಬಂಧ ಕೆ.ಟಿ.ಸಿ.ಪಿ. ಕಾಯ್ದೆ ಕಲಂ 10 ರನ್ವಯ ಕ್ರಮವಹಿಸಿರುವುದಾಗಿ ನಗರ ಯೋಜಕ ಸದಸ್ಯರು ತಿಳಿಸಿದರು. ಮಹಾ ಯೋಜನೆ ಕುರಿತು ಶೀಘ್ರವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**ಕಾರವಾರ:** ಮಹಾಯೋಜನೆ (ಪ–II) ತಾತ್ಕಾಲಿಕ ಸಿದ್ಧಪಡಿಸುವ ಸಂಬಂಧ ಕೆ.ಟಿ.ಸಿ.ಪಿ. ಕಾಯ್ದೆ ಕಲಂ 10 ರನ್ವಯ ಕ್ರಮವಹಿಸಿರುವುದಾಗಿ ಹಾಗೂ ಮೂಲ ನಕ್ಷೆ ಕಾಲೋಚಿತಗೊಳಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ನಗರ ಯೋಜಕ ಸದಸ್ಯರು ತಿಳಿಸಿದರು. ಈ ಕುರಿತು ಶೀಘ್ರವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**ಯಾದಗಿರಿ:** ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ವಿಸ್ತರಿಸುವ ಸಂಬಂಧ ದಿನಾಂಕ:11-01–2022 ರಂದು ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗಿರುತ್ತದೆ ಎಂದು ನಗರ ಯೋಜನಾ ಸದಸ್ಯರು ಸಭೆಗೆ ತಿಳಿಸಿದರು. ಪ್ರಸ್ತಾವನೆಯು ಕೇಂದ್ರ ಕಛೇರಿಯ ಪರಿಶೀಲನೆಯಲ್ಲಿರುತ್ತದೆ.

**ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ವಾಡಾ):** ಮಹಾ ಯೋಜನೆಯನ್ನು 02 ತಿಂಗಳೊಳಗಾಗಿ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲು ಕ್ರಮ ವಹಿಸುವಂತೆ ನಗರ ಯೋಜಕ ಸದಸ್ಯರಿಗೆ ತಿಳಿಸಲಾಯಿತು.

**ಅಮೃತ್ ಯೋಜನೆಯಡಿ ಒಳಗೊಂಡಿರುವ ಮಹಾ ಯೋಜನೆಗಳ ಪ್ರಗತಿ ಪರಿಶೀಲನೆ ವಿವರಗಳು:**

| ಕ್ರ. ಸಂ | ಪ್ರಾಧಿಕಾರ | ಗುತ್ತಿಗೆದಾರರು | ಪ್ರಾಧಿಕಾರದ ವಿವರ | ಷರಾ |
|---|---|---|---|---|
| 1 | ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ | EGIS Consultant (Package 1 & 4) | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | ಕೇಂದ್ರ ಸರ್ಕಾರ ಪುರಸ್ಕೃತ ಅಮೃತ್ ಯೋಜನೆಯಡಿ ಒಳಗೊಂಡಿರುವ ಮಹಾಯೋಜನೆಗಳನ್ನು ನಿಗದಿತ ಕಾಲಾವಧಿಯೊಳಗೆ ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕಾಗಿರುವುದರಿಂದ ಸಂಬಂಧಿತ ಪ್ರಾಧಿಕಾರಗಳು ಆದ್ಯತೆ ಮೇರೆಗೆ ಕ್ರಮ ಕೈಗೊಂಡು ಮಹಾಯೋಜನೆ ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಸೂಚಿಸಲಾಯಿತು. |
| 2 | ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | |
| 3 | ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು | |

| | | | | |
|---|---|---|---|---|
| | | | ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | |
| 4 | ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಅನುಮೋದನೆಗೊಂಡಿದ್ದು, ELU ತಯಾರಿಕೆ ಕಾರ್ಯ ಪ್ರಗತಿಯಲ್ಲಿರುವುದಾಗಿ ತಿಳಿಸಿದರು. ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | |
| 5 | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ | STEM Consultant (Package 2 & 3) | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು. | - " - |
| 6 | ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ | | - | - " - |
| 7 | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ | | - | - " - |
| 8 | ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು. | - " - |
| 9 | ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು. | - " - |
| 10 | ರಾಣೆಬೆನ್ನೂರು ಯೋಜನಾ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು. | - " - |
| 11 | ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ | REPL Consultant (Package 5) | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | - " - |
| 12 | ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ | - " - |

| | | | | |
|---|---|---|---|---|
| | | | ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | |
| 13 | ಬಾದಾಮಿ ಯೋಜನಾ ಪ್ರಾಧಿಕಾರ | | ಸದಸ್ಯ ಕಾರ್ಯದರ್ಶಿಗಳು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | - " - |
| 14 | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ | DDF Consultant (Package 6 & 9) | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು. | - " - |
| 15 | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ | | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು. | - " - |
| 16 | ಹಾಸನ ನಗರಾಭಿವೃದ್ಧಿ ಪ್ರಾಧಿಕಾರ | | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು. | - " - |
| 17 | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ | | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು. | - " - |
| 18 | ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ | | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು. | - " - |
| 19 | ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ | | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು. | - " - |
| 20 | ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ | Transverve Consultant (Package 7) | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | - " - |
| 21 | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು | - " - |

| | | | | |
|---|---|---|---|---|
| | | | ತಿಳಿಸಿದರು. | |
| 22 | ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರ | | ನಗರ ಯೋಜಕ ಸದಸ್ಯರು Base Map ಮುಕ್ತಾಯಗೊಂಡಿದ್ದು, PMR ಘಟಕಕ್ಕೆ ಪರಿಶೀಲನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು ಹಾಗೂ ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ಮಹಾಯೋಜನೆ ಸಿದ್ಧಪಡಿಸುವಿಕೆಗೆ ನಿಯೋಜಿಸಿರುವುದಿಲ್ಲ ಎಂದು ತಿಳಿಸಿದರು. | - " - |
| 23 | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ | WAPCOS Consultant (Package 8) | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು | - " - |
| 24 | ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ | | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು | - " - |
| 25 | ಗಂಗಾವತಿ ಯೋಜನಾ ಪ್ರಾಧಿಕಾರ | | ಗುತ್ತಿಗೆದಾರರು ಮಹಾಯೋಜನೆ ತಯಾರಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು | - " - |

**ಇತರೆ ವಿಷಯ:**

- ರಾಜ್ಯದ ವಿವಿಧ ಪಟ್ಟಣಗಳ ಸರಹದ್ದಿನ ನ್ಯೂನತೆಗಳಿಂದಾಗಿ ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಲು ಹಿನ್ನಡೆಯಾಗಿರುವುದರಿಂದ ಸರಹದ್ದಿನ ನ್ಯೂನತೆಗಳ ಕುರಿತು ಶಾಖಾ ಕಛೇರಿಗಳು ಕೈಗೊಂಡಿರುವ ಕ್ರಮಗಳು ಹಾಗೂ ಸದರಿ ಪ್ರಸ್ತಾವನೆಗಳ ಪ್ರಸ್ತುತ ಹಂತದ ಕುರಿತು ದಾಖಲೆಗಳೊಂದಿಗೆ ಕೂಡಲೇ ಕೇಂದ್ರ ಕಛೇರಿಗೆ ಮಾಹಿತಿ ಸಲ್ಲಿಸುವಂತೆ ತಿಳಿಸಲಾಯಿತು.
- ಸರ್ಕಾರದ ಆದೇಶದನ್ವಯ ಎಲ್ಲಾ ಕಛೇರಿಗಳು e-office ತಂತ್ರಾಂಶವನ್ನು ಅಳವಡಿಸಿಕೊಳ್ಳಲು ಸೂಚಿಸಲಾಯಿತು.
- ಆಯುಕ್ತರು ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ಪದನಿಮಿತ್ತ ನಿರ್ದೇಶಕರು (ಭೂಮಿ ಮತ್ತು ಯು.ಪಿ.ಓ.ಆರ್.) ರವರ ದಿನಾಂಕ: 09-02-2022ರ ಪತ್ರದಲ್ಲಿ ಏಕ ಮಾಲೀಕತ್ವದ ಪಹಣಿಯಲ್ಲಿನ ಪೂರ್ಣ ವಿಸ್ತೀರ್ಣಕ್ಕೆ ಭೂ ಪರಿವರ್ತನೆ ಕೋರಿ ಸಲ್ಲಿಸಲಾಗುವ ಅರ್ಜಿಗಳಿಗೆ ಭೂ ಪರಿವರ್ತನಾ ಕೋರುವ ನಕ್ಷೆಗಳಿಂದ ವಿನಾಯಿತಿ ನೀಡಿ ಆದೇಶಿಸಿರುವುದರಿಂದ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಆಗುತ್ತಿರುವ ತೊಂದರೆಗಳ ಬಗ್ಗೆ ಶಾಖಾ ಕಛೇರಿಗಳ ಹಾಗೂ ಪ್ರಾಧಿಕಾರಗಳ ಅಧಿಕಾರಿಗಳು ಸಭೆಗೆ ವಿವರಿಸಿದರು, ಈ ಬಗ್ಗೆ ಕೇಂದ್ರ ಕಛೇರಿಯಿಂದ ಸೂಕ್ತ ಕ್ರಮ ಕೈಗೊಳ್ಳುವುದಾಗಿ ನಿರ್ದೇಶಕರು ತಿಳಿಸಿದರು.

- ವಿನ್ಯಾಸ ನಕ್ಷೆ ಸಿದ್ಧಪಡಿಸಲು ಅವಶ್ಯವಿರುವ AutoCad Software ನ್ನು ಖರೀದಿಸುವ ಬಗ್ಗೆ ಶಾಖಾ ಕಛೇರಿಯ ಅಧಿಕಾರಿಗಳು ಪ್ರಸ್ತಾಪಿಸಿದ್ದು, ಈ ಕುರಿತು ಪರಿಶೀಲಿಸುವುದಾಗಿ ನಿರ್ದೇಶಕರು ತಿಳಿಸಿದರು.
- ಕೇಂದ್ರ ಸರ್ಕಾರದ Guidelines for Indian Government websites ರನ್ವಯ KMDS ಇವರು ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳು : ಯೋಜನಾ ಪ್ರಾಧಿಕಾರಗಳು : ಪೌರ ಯೋಜನಾ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ websites ಗಳನ್ನು ಕಾಲೋಚಿತಗೊಳಿಸಿ, ಸದರಿ websites ನಲ್ಲಿನ Content Management ಕುರಿತು ದಿ:17.03.2022 ಹಾಗೂ ದಿ:18.03.2022 ರಂದು ತರಬೇತಿ ನೀಡಿರುವ ಬಗ್ಗೆ ಸಭೆಯಲ್ಲಿ ತಿಳಿಸಲಾಗಿ, ತರಬೇತಿಯಲ್ಲಿ ನೀಡಿದ ನಿರ್ದೇಶನಗಳಂತೆ websites ಗಳಲ್ಲಿ ಕೂಡಲೇ ಅಗತ್ಯವಿರುವ ದತ್ತಾಂಶವನ್ನು upload ಮಾಡಲು ಕ್ರಮ ಕೈಗೊಳ್ಳಲು ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.
- KMDS ಇವರಿಂದ ತಯಾರಿಸಲಾಗಿರುವ "Stages of Master Plan" ನಲ್ಲಿ ಪ್ರಾಧಿಕಾರಗಳು ಪೂರ್ಣ ಮಾಹಿತಿ ಇದುವರೆಗೂ upload ಮಾಡದೇ ಇರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿ, ಕೂಡಲೇ ಪೂರ್ಣ ವಿವರಗಳನ್ನು Module ನಲ್ಲಿ upload ಮಾಡಿ, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ವರದಿ ನೀಡಲು ಸಭೆಯಲ್ಲಿನ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 18 ರಡಿ ಪಾವತಿಸಿಕೊಳ್ಳುವ ಶುಲ್ಕದ ಶೇ.5 ರಷ್ಟು ವಾರ್ಷಿಕ ಮೊತ್ತವನ್ನು ಮಂಡಳಿಗೆ ಪಾವತಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿ ಇದುವರೆವಿಗೂ ಸದರಿ ಮೊತ್ತವನ್ನು ಪಾವತಿಸದೇ ಇರುವ ಪ್ರಾಧಿಕಾರಗಳ ವಿವರಗಳೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು. ಮಂಡಳಿಯಿಂದ ಈ ಸಂಬಂಧ ಪ್ರಾಧಿಕಾರಗಳಿಗೆ ಕಾಲಕಾಲಕ್ಕೆ ನೆನಪೋಲೆಗಳನ್ನು ಸಹ ಕಳುಹಿಸಲಾಗುತ್ತಿದ್ದು, ಈ ಬಗ್ಗೆ ಪರಿಶೀಲಿಸಿಕೊಂಡು ಸದರಿ ಮೊತ್ತವನ್ನು ಮಂಡಳಿಗೆ ಅಗತ್ಯವಾಗಿ ಪಾವತಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿನ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ವಂದನೆಗಳೊಂದಿಗೆ ಸಭೆಯ ಕಾರ್ಯ ಕಲಾಪಗಳನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ, ಗೇಟ್-4,
ಪಿ.ಬಿ. ನಂ. 5257,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560001.

ಸಂ: DTCP-40-MTG-2019-20 01 JUN 2022

**<u>ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.</u>**

1. ಮಹಾನಗರ ಯೋಜಕರು, ಬಿ.ಎಂ.ಆರ್.ಡಿ.ಎ. ಬೆಂಗಳೂರು ಇವರ ಮಾಹಿತಿಗಾಗಿ.
2. ಮುಖ್ಯ ನಗರ ಯೋಜಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರ ಮಾಹಿತಿಗಾಗಿ.
3. ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಮಾಹಿತಿಗಾಗಿ.
4. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
5. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ.

6. ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು, ಬಿ.ಡಿ.ಎ., ಬಿ.ಎಂ.ಐ.ಸಿ.ಎ.ಪಿ.ಎ., ಬಿ.ಎಂ.ಆರ್.ಡಿ.ಎ. ಬಿ.ಬಿ.ಎಂ.ಪಿ., ಮತ್ತು ಕೆ.ಹೆಚ್.ಬಿ., ಬೆಂಗಳೂರು.
7. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು, ಮೈಸೂರು, ಕಲಬುರಗಿ ವಿಭಾಗ.
8. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ನಗರ ನಕ್ಷೆ ಕೋಶ ಬೆಂಗಳೂರು ಹಾಗೂ ನಗರಾಭಿವೃದ್ಧಿ ಇಲಾಖೆ (ತಾಂತ್ರಿಕ ಕೋಶ), ಬೆಂಗಳೂರು.
9. ರಾಜ್ಯದ ಎಲ್ಲಾ ನಗರ ಯೋಜಕ ಸದಸ್ಯರು/ ಸದಸ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ.
10. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
11. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು.
12. ಎಲ್ಲಾ ಶಾಖಾ ಕಛೇರಿಗಳಿಗೆ.
13. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ.
14. ಪತ್ರಾಂಕಿತ ವ್ಯವಸ್ಥಾಪಕರು, ಲೆಕ್ಕಾಧೀಕ್ಷಕರು, ಕೇಂದ್ರ ಕಛೇರಿ.
15. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಆಪ್ತ ಸಹಾಯಕರ ಶಾಖೆಗೆ ಮಾಹಿತಿಗಾಗಿ.
16. ಕಛೇರಿ ಪ್ರತಿ.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು

ರವಾನಿಸಲಾಗಿದೆ
1/6/22

o/c